ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಬಿಪಿ ರಮೇಶ್

ತಂದೆ/ ಗಂಡನ ಹೆಸರು :- ಪಾಪನಾಯಕ

ವಯಸ್ಸು :- 52 ವರ್ಷ

ಉದ್ಯೋಗ :- ಪಿಎಸ್ ಐ

ವಾಸಸ್ಥಳ :- ಮೈಸೂರು ರೈಲ್ವೆ

(ಸಾಕ್ಷಿಗೆ ದಿನಾಂಕಃ 02-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು 2007 ರಿಂದ 2014 ರವರೆಗೆ ಪಿಎಸ್ ಐ ಯಾಗಿ ಮೈಸೂರು ರೈಲ್ವೆ ವಲಯದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, 2024 ರಿಂದ ಇದುವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 08-03-2015 ರಂದು ನನಗೆ ಚಾಸಾ-14 ರವರು ಆರೋಪಿ 2 ಮತ್ತು 3 ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸೂಚನೆ ನೀಡಿದ ಮೇರೆಗೆ ಅದೇದಿನ ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಮಾಹಿತಿ ಪಡೆದು ಸದರಿಯವರು ರಜಾದಲ್ಲಿ ಇದ್ದು ಮನೆಯು ಕೆಂಗೇರಿಯ ರೈಲ್ವೆ ನಿಲ್ದಾಣದ ಬಳಿ ಇದೆ ಎಂದು ತಿಳಿದು ನಾನು ಸ್ಥಳಕ್ಕೆ ಬಂದು ಆರೋಪಿ 2 ರವರನ್ನು ಪತ್ತೆ ಮಾಡಿ ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ.

ದಿ 15-03-2015 ರಂದು ಆರೋಪಿ 3 ರವರ ಬಗ್ಗೆ ಮಾಹಿತಿ ಪಡೆದು ಬೆಂಗಳೂರಿನ ಕಂಟ್ರೋಲ್ ರೈಲ್ವೆ ನಿಲ್ದಾಣದ ಬಳಿ ಆರೋಪಿ 3 ರವರನ್ನು ಪತ್ತೆ ಮಾಡಿ ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಆರೋಪಿ 2, 3 ರವರು ಇರುವುದಿಲ್ಲ, ಸದರಿಯವರು ಗೈರು ಹಾಜರಿದ್ದು, ವಿನಾಯಿತಿ ನೀಡಿರುವುದರಿಂದ ಗುರುತಿಸಲು ವಿನಾಯಿತಿ ನೀಡಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ವಕೀಲರಿಂದಃ–**

ಆರೋಪಿ 2 ರವರನ್ನು ಪತ್ತೆ ಮಾಡಿ ಹಾಜರುಪಡಿಸಲು ಚಾಸಾ-14 ರವರು ನನಗೆ ದೂರವಾಣಿ ಮೂಲಕ ಸೂಚಿಸಿದ್ದರು. ಆರೋಪಿಯನ್ನು ಬಂಧಿಸಲು ನಾನು ಒಬ್ಬನೇ ಹೋಗಿದ್ದೆನು. ಆರೋಪಿಯನ್ನು ಬಂಧಿಸಲು ವಾರೆಂಟ್

ಜಾರಿಗೊಳಿಸಿರಲಿಲ್ಲ. ಆರೋಪಿಯನ್ನು ಬಂಧಿಸಿಲ್ಲ ಮತ್ತು ಚಾಸಾ-14 ರವರ ಮುಂದೆ ಹಾಜರುಪಡಿಸಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು